ದಿನಾಂಕಃ 27.06.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಬಿ.ಎಲ್.ಜಿ. ವಕೀಲರಿಂದಃ

ನಾನು ಈ ದಾವೆಯ ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

1. ಮಂಜೂರಾತಿ ಪತ್ರವನ್ನು ನಿಪಿ-1 ಎಂದು,
2. ಹಣ ಪಾವತಿ ಮಾಡಿದ ಬಗ್ಗೆ ರಶೀದಿಯ ದೃಢೀಕೃತ ನಕಲು ಪ್ರತಿಯನ್ನು ನಿಪಿ-2 ಎಂದು,
3. ಸ.ನಂ. 66 ರ ಸಂಬಂಧ ನಕಾಶೆಯ ದೃಢೀಕೃತ ನಕಲು ಪ್ರತಿಯನ್ನು ನಿಪಿ-3 ಎಂದು,
4. ಎಂ.ಆರ್. 7/1991-92 ರ ಮುಟೇಶನ ರೆಜಿಸ್ಟರ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ-4 ಎಂದು,
5. ಎಂ.ಆರ್. 9/1997-98 ರ ಮುಟೇಶನ ರೆಜಿಸ್ಟರ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ-5 ಎಂದು,
6. ಎಂ.ಆರ್. 15/1997-98 ರ ಮುಟೇಶನ ರೆಜಿಸ್ಟರ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ-6 ಎಂದು,
7. ಸ.ನಂ.66 ಪಿ ರ ಎರಡು ಕೈಬರಹ ಪಹಣಿಗಳ ದೃಢೀಕೃತ ನಕಲು ಪ್ರತಿಯನ್ನು ನಿಪಿ-7 ಮತ್ತು 8 ಎಂದು,
8. ದಿಃ 08.02.1999 ರ ನೊಂದಾಯಿತ ಮರಣ ಶಾಸನ ಪತ್ರವನ್ನು ನಿಪಿ-9 ಎಂದು,
9. ಕೃಷ್ಣೇಗೌಡ ರವರ ಮರಣ ಪ್ರಮಾಣ ಪತ್ರವನ್ನು ನಿಪಿ-10 ಎಂದು,
10. ಎಂ.ಆರ್.3/1999-2000 ರ ಮುಟೇಶನ ರೆಜಿಸ್ಟರ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ-11 ಎಂದು,
11. ಸ.ನಂ.66 ಪಿ ರ ಗಣಕೀಕೃತ ಪಹಣಿಯನ್ನು ನಿಪಿ-12 ಎಂದು,
12. ಸ.ನಂ.66/1 ಪಿ ರ ಗಣಕೀಕೃತ ಪಹಣಿಯನ್ನು ನಿಪಿ-13 ಎಂದು,
13. ಅಸಲು ದಾವೆ ನಂ.6/2012 ರ ವಾದ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-14 ಎಂದು,
14. ಅಸಲು ದಾವೆ ನಂ.6/2012 ರ ರಾಜಿ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-15 ಎಂದು,
15. ಅಸಲು ದಾವೆ ನಂ.6/2012 ರ ಆದೇಶ ಪುಟದ ದೃಢೀಕೃತ ನಕಲು ಪ್ರತಿಯನ್ನು ನಿಪಿ-16 ಎಂದು,

16. ಎಂ.ಆರ್.ಹೆಚ್.14/2015-16 ರ ಮುಟೇಶನ ಪ್ರತಿಯನ್ನು ನಿಪಿ-17 ಎಂದು,

17. ಸ.ನಂ.71 ರ ಗಣಕೀಕೃತ ಪಹಣಿಯನ್ನು ನಿಪಿ-18 ಎಂದು,

18. ಸ.ನಂ.66 ರ ಗಣಕೀಕೃತ ಪಹಣಿಯನ್ನು ನಿಪಿ-19 ಎಂದು,

19. ದಿಃ 06.01.2023 ರ ಸಾಮಾನ್ಯ ಅಧಿಕಾರ ಪತ್ರವನ್ನು ನಿಪಿ-20 ಎಂದು ಗುರುತಿಸಲಾಯಿತು.

**(ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,
ನ್ಯಾಯಾಧೀಶರು, ಹುಣಸೂರು.